4
ಮೊದಲ ಭೆಟ್ಟಿಗೆ ಬಂದ ಮಳ್ಳೆಣ್ಣು ಮಾಡಿದ್ಹಾಂಗ
ತುಟಿ ಕಚ್ಚಿ ತಡವರಿಸಿ ತಡದೇನ
ತಂತ್ಯಲ್ಲ; ಜೀವದ ತಂತು ನೀ, ಅಂತನ
ಶ್ರುತಿ ಹಿಡಿದು ಜತಿ ಹಿಡಿದು ನಡದೇನ
5
ಕಂಕಣ ಕಾಲುಂಗರಕ ಮೆಲ್ಲುಸಿರ–ಛಂದಕ
ಕುಣಿತಾನ ನಡೆದ್ಹಾಂಗ ಕಾಲಾಗ
ಕರಗಿ ಬಾ, ಅರಗಿ ಬಾ, ಎರಗಿ ಬಾ, ಸಣ್ಣಾಗಿ
ಸಕ್ಕರ ಬೆರೆದ್ಹಾಂಗ ಹಾಲಾಗ
6
ನಂಬಿಸಿ ರಂಬಿಸಿ ಚುಂಬಿಸಿ ಎದೆಗೊಂಬಿ
ಬಿಂಬೀಸಿ ಎದೆಯೊಳಗ ಅಂದ್ಹಾಂಗ
ಝುಣಣ ಮಿಡಿದಾವ ತಂತಿ; ಗೆಜ್ಜಿ ಪೈಜಣ ಕಟ್ಟಿ
ಮಾಯೆಯ ಮೈಯೊಳಗ ಬಂದ್ಹಾಂಗ
7
ಅಗಲಿದ ಇನಿಯನ ಫಕ್ಕನೆ ನೋಡುತ
ಬಸಿರ ಹೂ ಕುಲುಕುಲು ನಕ್ಹಾಂಗ
ನಲ್ಲ ಮುಟ್ಟದ ಗಲ್ಲ, ನಲ್ಲೆಯ ಮೈಯೆಲ್ಲ
ಹಿಗ್ಗಿನ ಮುಳ್ಳಿಗೆ ಸಿಕ್ಹಾಂಗ
8
ಜುಮ್ ಜುಮು ರುಮುಜುಮು ಗುಂಗುಣು ದುಮುದುಮು
ನಾದದ ನದಿಯೊಂದು ನಡೆದ್ಹಾಂಗ
ಗಲ್ಲಗಲ್ಲಕೆ ಹಚ್ಚಿ ನಲ್ಲನಲ್ಲೆಯರಿರುಳು
ಗುಜುಗುಜು ಗುಲುಗುಲು ನುಡಿದ್ಹಾಂಗ
9
ಹೆಣ್ಗಂಡು ಜೇನ್ನೊಣ ಮುದ್ದಾಡಿ ಕಚ್ಚಾಡಿ
ಹೂಜೇನ ಹನಿಹನಿ ಕುಡಿದ್ಹಾಂಗ
ಮಂಕಾಗಿ ಮೂಕಾದ ಮನದ ಮಿಡುಕಾಟದ
ಮೊಗ್ಗಿಗೆ ಬಾಯಿಲ್ಲಿ ಒಡಿದ್ಹಾಂಗ
10
ಸಂಜೀಯ ಮುಗಿಲಾಗ ರೊಝಬಿಲ್ಲ ಪಟವೊಂದು
ಗಾಳಿ ಸುಳಿಗೆ ಶ್ರುತಿ ಹಿಡಿದ್ಹಾಂಗ
ಗಗನಸಂಚಾರದ ನಾರದನ ವೀಣೆಯ
ಹಾಡೀನ ತೆರಿತೆರಿ ಬಡಿದ್ಹಾಂಗ
11
ಆತನೀತನವಂತ ಯಾತನದ ಯಾತನೆಯ

